ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ಪೀಠಗಳನ್ನು ತೆರೆಯುವ ಬಗ್ಗೆ

2723 - ಶ್ರೀ ಬಸವರಾಜ್ ಪಾಟೀಲ ಅಟ್ಟೂರ (ಬಸವಕಲ್ಯಾಣ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಲ್ಬರ್ಗಾ ವಿಶ್ವವಿದ್ಯಾನಿಲಯದಲ್ಲಿ ಈವರೆಗೆ ಯಾರ ಯಾರ ಹೆಸರುಗಳ ಮೇಲೆ ಪೀಠಗಳನ್ನು ತೆರೆಯಲಾಗಿದೆ?*

ಆ) *ಇಲ್ಲಿ ಬಸವ ಪೀಠವನ್ನು ತೆರೆಯಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?*

ಇ) *ಸಾರ್ವಜನಿಕ ಒತ್ತಾಯವಿರುವುದರಿಂದ ಈ ಪೀಠವನ್ನು ಎಷ್ಟು ದಿವಸಗಳಲ್ಲಿ ತೆರೆಯಲಾಗುವುದು?*

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಯಾರ ಹೆಸರಿನಲ್ಲೂ ಪೀಠ ತೆರೆಯಲಾಗಿಲ್ಲ.

ಆ) 'ಬಸವ' ಪೀಠವನ್ನು ತೆರೆಯಲು ಸರ್ಕಾರಕ್ಕೆ ಯಾವುದೇ ಪ್ರಸ್ತಾವನೆ ಬಂದಿಲ್ಲ.

ಇ) ಉದ್ಭವಿಸುವುದಿಲ್ಲ.

ಮುಳ್ಳಿಯ ಸಹಕಾರ ಸೊಸೈಟಿಯಲ್ಲಿ ಚಿನ್ನ ಕಳುವು ಆಗಿರುವುದರ ಬಗ್ಗೆ

2848 - ಶ್ರೀ ಸೋಮಪ್ಪ ಸುವರ್ಣ (ಮೂಡಬಿದ್ರಿ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮುಳ್ಳಿಯ ಸಹಕಾರ ಸೊಸೈಟಿಯಲ್ಲಿ ಕಳುವಾದ ಅಡವಿಟ್ಟ ಚಿನ್ನದ ಪತ್ತೆ ಕಾರ್ಯ ಯಾವ ಹಂತ ತಲುಪಿದೆ?*

ಆ) *ಇಲಾಖಾ ತನಿಖಾಧಿಕಾರಿಯವರ ವರದಿ ಸರ್ಕಾರದ ಕೈಸೇರಿರುವುದೇ?*

ಇ) *ಆ ವರದಿಯಲ್ಲಿ ಏನು ಅಭಿಪ್ರಾಯ ವ್ಯಕ್ತಪಡಿಸಲಾಗಿದೆ?*

ಈ) *ಈ ಬಗ್ಗೆ ಜೀವ ವಿಮೆಯ ಹಣ ಈ ತನಕ ಯಾಕೆ ದೊರೆತಿರುವುದಿಲ್ಲ?*

ಉ) *ಚಿನ್ನ ಕಳೆದುಕೊಂಡ ಜನರಿಗೆ ಸರ್ಕಾರ ಯಾವ ತರದ ಪರಿಹಾರವನ್ನು ಒದಗಿಸುವುದು?*

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು) :

ಅ) ಪೋಲೀಸ್ ಪತ್ತೆ ಹಚ್ಚಲಾಗದ ಪ್ರಕರಣವೆಂದು ವರದಿ ಮಾಡಿದ ನಂತರ ಸಹಕಾರ ಇಲಾಖೆಯಿಂದ ಸಹಕಾರ ಸಂಘಗಳ ಕಾಯ್ದೆ, 1959ರ ಕಲಂ, 64ರ ರೀತಿ ವಿಚಾರಣೆ ಮಾಡಲಾಗಿದೆ. ಈ ಪ್ರಕರಣವನ್ನು ಸಿ.ಓ.ಡಿ.ಗೆ ತನಿಖೆಗೆ ಒಪ್ಪಿಸಲು ಗೃಹ ಇಲಾಖೆಗೆ ಕೋರಲಾಗಿದೆ.

ಆ) ಹೌದು.

ಇ) ವಿಚಾರಣಾ ವರದಿಯಲ್ಲಿ ಆಡಳಿತ ಮಂಡಳಿ ಚಿನ್ನಾಭರಣ ಭದ್ರತೆ ಬಗ್ಗೆ ಸಾಕಷ್ಟು ಎಚ್ಚರಿಕೆ ವಹಿಸಿರುವುದಿಲ್ಲವೆಂದು ಹಾಗೂ ಚಿನ್ನಾಭರಣ ಮೌಲ್ಯಕ್ಕಿಂತಲೂ ಕಡಿಮೆ ಮೌಲ್ಯಕ್ಕೆ ವಿಮೆ ಮಾಡಿಸಿ ಲೋಪ ಮಾಡಿರುತ್ತಾರೆಂದು ವರದಿ ಮಾಡಿರುತ್ತಾರೆ.